# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

## ಸಿ.ಸಿ.ನಂ. 329/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಕುಮಾರ | ಪಿ.ಡಬ್ಲ್ಯೂ-02 |
| ತಂದೆಯ ಹೆಸರು | : | ಕರಿಗೌಡ | ಸಿ.ಡಬ್ಲ್ಯೂ-03 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ವ್ಯವಸಾಯ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 01.09.2021 |
| ವಾಸಸ್ಥಳ | : | ಹತ್ವಾಳು ಗ್ರಾಮ, ಹೆಗ್ಗಡದೇವನಕೋಟೆ ತಾ. | ಕಲಂ 299 ಸಿ ಆರ್ ಪಿ ಸಿ ರೀತ್ಯಾ |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ಆರೋಪಿ ನನಗೆ ಗೊತ್ತು. ಚಾಸಾ.1 ರವರು ಸಹ ನನಗೆ ಗೊತ್ತು. ಸಾಕ್ಷಿಗೆ ತೋರಿಸುತ್ತಿರುವ ದಾಖಲಾತಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 4-5 ವರ್ಷದ ಹಿಂದೆ ನಮ್ಮ ಊರಿಗೆ ಪೋಲಿಸರು ಬಂದಾಗ ಅವರ ಹೇಳಿಕೆ ಮೇರೆಗೆ ನಾನು ಮಾಡಿರುತ್ತೇನೆ. ನಿಪಿ-4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಎಪಿಪಿ ರವರಿಂದಃ

ಆರೋಪಿ ಮತ್ತು ಚಾಸಾ.1 ರವರ ನಡುಗೆ ಆಗಿರುವ ಗಲಾಟೆಯ ವಿಚಾರದಲ್ಲಿ ದಿಃ 10.06.2016 ರಂದು ಹತ್ವಾಳು ಗ್ರಾಮದಲ್ಲಿ ಮರಿಸ್ವಾಮಪ್ಪ ರವರ ವಾಸದ ಮನೆಯ ಬಳಿ ಪೋಲಿಸರು ನನ್ನನ್ನು ಮಹಜರ್ ಸಾಕ್ಷಿದಾರಾರಾಗಿ ಬನ್ನಿ ಎಂದು ಕರೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮಹಜರ್ ನ ವಿಚಾರವನ್ನು ತಿಳಿಸಿ ನನ್ನ ಸಮಕ್ಷಮ ನಿಪಿ.4 ರಂತೆ ಮಹಜರ್ ಕ್ರಮವನ್ನುಜರುಗಿಸಿಗಿರುತ್ತಾರೆ ಎಂದರೆ ಸರಿಯಲ್ಲ ನಾನು ಮಹಜರ್ ಕಾಲದಲ್ಲಿ ಹಾಜರಿದ್ದು ವಿಚಾರವೆಲ್ಲವನ್ನು ತಿಳಿದುಕೊಂಡು ನಿಪಿ.4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ